ಒಪ್ಪಿಕೊಳ್ಳಬೇಕಾಗುತ್ತದೆ. ಇದನ್ನು ಮಾನ್ಯ ಉಪ ಮುಖ್ಯಮಂತ್ರಿಯವರು ಮಾಡುತ್ತಾರೆ. ಇದರ ಜೊತೆಗೆ ಕೆಲವು ಬೆಳೆಗಳು ಏನು ಸೇರಬೇಕು, ಅದರಲ್ಲಿ ಕೇಂದ್ರ ಸರ್ಕಾರದವರು ಕಳೆದ ಸಾರಿ ಹತ್ತಿಯನ್ನು ಸೇರಿಸಿರಲಿಲ್ಲ. ಈ ಸಲ ಹತ್ತಿ ಬಂದಿದೆ. ಹಾಗೆ ಹೊಸ ಹೊಸ ಬೆಳೆಗಳನ್ನು.....

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಈಗ 31ನೇ ತಾರೀಖು ಎಂದು ಏನು ಲಾಸ್ಟ್ ಡೇಟ್ ಇದೆ, ಯಾವ್ಯಾವ ಕ್ರಾಪ್ ಮೇಲೆ ಪ್ರೀಮಿಯಮ್ ಹಣವನ್ನು ತುಂಬಬೇಕಲ್ಲಾ, ಆ ಕ್ರಾಪ್ ಸಿಸ್ಟಂ ಅನ್ನು ಕಂಟಿನ್ಯೂ ಮಾಡಬೇಕು. ಕೆಲವೊಂದು ಕ್ರಾಪ್‌ಗಳನ್ನು ತೆಗೆದುಬಿಡುತ್ತಾರೆ.

ಶ್ರೀ ಹೆಚ್.ಕೆ. ಪಾಟೀಲ್ : ಇಲ್ಲ, ಯಾವುದನ್ನೂ ತೆಗೆದಿಲ್ಲ, ಈ ಸಾರಿ ಹತ್ತಿ ಒಂದು ಜಾಸ್ತಿ ಮಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಒಮ್ಮೊಮ್ಮೆ ಕೆಲವು ಐಟಂಗಳನ್ನು ತೆಗೆದುಬಿಡುತ್ತಾರೆ. ಅವುಗಳನ್ನು ಯಾವುದೂ ತೆಗೆಯದ ಹಾಗೆ ಟೈಮ್ ಎಕ್ಸ್‌ಟೆನ್‌ಶನ್ ಆಗಬೇಕು.

ಅಧ್ಯಕ್ಷರು : ಈಗ ಬೇಡಿಕೆಗಳ ಮೇಲೆ ಆದ ಚರ್ಚೆಗೆ ಉತ್ತರ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಬೇಡಿಕೆಗಳ ಮೇಲೆ ಉತ್ತರವನ್ನು ಪ್ರಾರಂಭ ಮಾಡುವ ಮೊದಲು, ಚುನಾವಣಾ ಪ್ರಸ್ತಾವ ಇದೆ.

3. ಚುನಾವಣಾ ಪ್ರಸ್ತಾವ

(ಅ) ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಈಗಾಗಲೇ ದಿ: 19.7.2005ರಂದು ವಿಧಾನಸಭೆಯ ವಿವಿಧ ಸಮಿತಿಗಳನ್ನು ರಚಿಸಲು ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ವಿಧಾನಸಭೆಯ ವಿವಿಧ ಸಮಿತಿಯ ಸಭೆಗಳಿಗೆ ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:– "ವಿಧಾನಸಭೆಯ ವಿವಿಧ ಸಮಿತಿಗಳಿಗೆ ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಈ ಸದನವು ಸನ್ಮಾನ್ಯ ಸಭಾಧ್ಯಕ್ಷರಿಗೆ ಅನುಮತಿಯನ್ನು ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಆ) ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ,

"ಅಂಗವಿಕಲರ ಅಧಿನಿಯಮ 1995ನ್ನು ಅನುಷ್ಠಾನಗೊಳಿಸಲು ರಚಿಸಲಾಗಿರುವ ರಾಜ್ಯ ಸಮನ್ವಯ ಸಮಿತಿಗೆ, ಅಂಗವಿಕಲರ ಅಧಿನಿಯಮದ ಕಲಂ 13(2)(ಜಿ) ರಲ್ಲಿನ ಅವಕಾಶದಂತೆ ಇಬ್ಬರು ಸದಸ್ಯರನ್ನು ಚುನಾಯಿಸಲು ದಿನಾಂಕ 4.7.2005ರಂದು ಪ್ರಸ್ತಾವನೆಯನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮದ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಅಂಗವಿಕಲರ ರಾಜ್ಯ ಸಮನ್ವಯ ಸಮಿತಿಗೆ ಇಬ್ಬರು ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಅಂಗವಿಕಲರ ಅಧಿನಿಯಮ 1995ನ್ನು ಅನುಷ್ಠಾನಗೊಳಿಸಲು ರಚಿಸಲಾಗಿರುವ ರಾಜ್ಯ ಸಮನ್ವಯ ಸಮಿತಿಗೆ, ಅಂಗವಿಕಲರ ಅಧಿನಿಯಮದ ಕಲಂ 13(2)(ಜಿ)ರಲ್ಲಿನ ಅವಕಾಶದಂತೆ ಇಬ್ಬರು ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಸನ್ಮಾನ್ಯ ಸಭಾಧ್ಯಕ್ಷರಿಗೆ ಅನುಮತಿಯನ್ನು ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಹೆಬ್ರಿಯಲ್ಲಿ ನೆಲಬಾಂಬನ್ನು ಸ್ಫೋಟ ಮಾಡಿರುವ ನಕ್ಸಲೀಯರ ಚಟುವಟಿಕೆಗಳನ್ನು ಹತ್ತಿಕ್ಕಲು ತೀವ್ರವಾದ ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಿನ್ನೆ ಬಾಂಬ್ ಬಿದ್ದಿದೆ. ಅದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳುವುದೋ, ಏನಾದರೂ ಮಾಡಬೇಕು. ನಿಮ್ಮ ರಿಪ್ಲೈ ಸ್ಟಾರ್ಟ್ ಆದಮೇಲೆ ನಾವು ಇದನ್ನು ಪದೇಪದೇ ಹೇಳಲು ಆಗುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಏನೇನು ನಡೆದಿದೆ ಎನ್ನುವುದಕ್ಕೆ ಸರ್ಕಾರವೇ ತಕ್ಷಣ ಉತ್ತರ ಕೊಡಬೇಕು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾಧುಸ್ವಾಮಿಯವರೇ, ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಉತ್ತರ ಕೊಡುವುದಕ್ಕೆ ಮುಂಚೆ, ತಾವು ಮೊದಲು ಇದನ್ನು ಹೇಳಿಬಿಡಿ.

ಶ್ರೀ ಧರ್ಮಸಿಂಗ್ : ಅವರದ್ದು ಆದಮೇಲೆ ನಾನು ಹೇಳುತ್ತೇನೆ.

ಅಧ್ಯಕ್ಷರು : ಎಲ್ಲವನ್ನೂ ಹೇಳುತ್ತಾರೆ ಕುಳಿತುಕೊಳ್ಳಿ. ಅವರು ತಮ್ಮ ಉತ್ತರದಲ್ಲಿ ಹೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಾವು ಏಕೆ ಆತಂಕಗೊಂಡಿದ್ದೇವೆ ಎಂದರೆ, ಕರ್ನಾಟಕ ರಾಜ್ಯದಲ್ಲಿ ರಿಮೋಟ್ ಬಾಂಬ್ ಹಾಕುವಂಥ ಪ್ರಯತ್ನ ಇದುವರೆಗೂ ಯಾರೂ ಮಾಡಿರಲಿಲ್ಲ, ಇಂಥ ಘಟನೆ ನಡೆದಿರಲಿಲ್ಲ. ಎಲ್ಲೋ ಕುಳಿತು ಬಟನ್ ಒತ್ತಿದ ತಕ್ಷಣ, ಎರಡು ವೈರ್‌ಗಳು ಟಚ್ ಆದತಕ್ಷಣ ಸ್ಫೋಟ ಆಗುವಂಥಾದ್ದು ಏನಿದೆ, ಒಂದು ವೇಳೆ ಅದು ನೆಲಕ್ಕೆ ಅಪ್ಪಳಿಸದೇ ಪೊಲೀಸ್ ಜೀಪಿಗೇ ಅಪ್ಪಳಿಸಿದ್ದರೆ 7–8 ಜನ ಅಸು ನೀಗುತ್ತಿದ್ದರು. ಪೊಲೀಸರು ಆ ಕೆಲಸದಲ್ಲಿ ನಿರತರಾಗಿರುವಾಗ ಇದು ನಡೆದಿದೆ. ಹೀಗಾಗಿ, ಆ ಭಾಗದ ಶಾಸಕರು, ಅದು ಮಂಗಳೂರು ಶಾಸಕರಿರಬಹುದು, ಚಿಕ್ಕಮಗಳೂರು ಇರಬಹುದು, ಮತ್ತೊಬ್ಬರಿರಬಹುದು, ನಮ್ಮ ಶಾಸಕರು ಓಡಾಟ ಮಾಡಲು ಆಗದೇ ಉಸಿರು ಕಟ್ಟುವಂಥ ಸ್ಥಿತಿ ಇದೆ. ಒಂದು ಈ ಶಾಸಕರಿಗೆ ಭದ್ರತೆ ಕೊಡುವಂಥಾದ್ದು, ರಕ್ಷಣೆ ಕೊಡುವಂಥಾದ್ದು, ಪೊಲೀಸ್ ಬಂದೋಬಸ್ತ್ ಮಾಡುವಂಥಾದ್ದು ಮತ್ತು ನೀವು ಘೋಷಣೆ ಮಾಡಿದಂಥ ಪ್ಯಾಕೇಜನ್ನು ಕಾರ್ಯ